**CCE PF**
**CCE PR**

ಸಂಕೇತ ಸಂಖ್ಯೆ : **62-K** ವಿಷಯ : **ತೃತೀಯ ಭಾಷೆ — ಕನ್ನಡ**

**Code No. : 62-K Subject : Third Language — KANNADA**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ, ಪದ್ಯ ಮತ್ತು ಪೋಷಕ ಅಧ್ಯಯನಗಳ 73 ಅಂಕಗಳ ಒಟ್ಟಾರೆ 39 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ಆನ್ವಯಿಕ ವ್ಯಾಕರಣ, ಅಲಂಕಾರ ಮತ್ತು ಛಂದಸ್ಸುಗಳ 12 ಅಂಕಗಳ ಒಟ್ಟಾರೆ 12 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 15 ಅಂಕಗಳ ಒಟ್ಟಾರೆ 7 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತಿ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : 16 × 1 = 16

1. ಅಷ್ಟಾದಶಾಕ್ಷರೀ ಮಂತ್ರ ಯಾವುದು ?

2. ಅನಿಲ್ ಕುಂಬ್ಳೆಯವರು ಪಡೆದ ಉನ್ನತ ಪದವಿ ಯಾವುದು ?

3. ಕುಂಬ್ಳೆಯವರು ಒಂದೇ ಇನ್ನಿಂಗ್ಸ್‌ನಲ್ಲಿ ಹತ್ತು ವಿಕೆಟ್‌ಗಳನ್ನು ಯಾವ ತಂಡದ ವಿರುದ್ಧ ಪಡೆದರು ?

4. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಅಲ್ಲದೆ ಇನ್ನಾವ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ ?

5. ಕೆಳದಿಯ ರಾಣಿ ಚೆನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು ?

6. ರಾಣಿ ಅಬ್ಬಕ್ಕ ದೇವಿಯನ್ನು ಕಂಡುಬರಲು ಪಿತ್ರೋಗೆ ತಿಳಿಸಿದವರು ಯಾರು ?

7. ನಾ. ಕಸ್ತೂರಿಯವರು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು ಹೇಗೆ ?

8. ಕೋಗಿಲೆಯ ಗಾನವು ಮನುಜ ಲೋಕವನ್ನು ಏನಾಗಿ ಪರಿವರ್ತಿಸಿದೆ ?

9. ಯಾವ ಯಾವ ಬೆಳಕಿನ ಸತ್ವ ಒಂದೇ ಎಂದು ಕೆ.ಎಸ್. ನಿಸಾರ್ ಅಹಮದ್‌ರು ಹೇಳಿದ್ದಾರೆ ?

10. ದೇಶದ ಪ್ರಗತಿ ನಮ್ಮಿಂದ ಯಾವಾಗ ಸಾಧ್ಯವಾಗುತ್ತದೆ ?

11. ಮುಕ್ತಿಯು ಸಮೀಪವಾಗಬೇಕಾದರೆ ವ್ಯಕ್ತಿಯು ತನ್ನ ಗಮನವನ್ನು ಎಲ್ಲಿ ಹರಿಸಬೇಕು ?

12. ರೈತನಿಗೆ ಮೋಡಗಳು ಹೇಗೆ ಕಾಣುತ್ತಿದವು ?

13. ಎಂಥವನು ಮಂತ್ರಿಯಾಗಬೇಕೆಂದು ಪುಲಿಗೆರೆ ಸೋಮ ತಿಳಿಸಿದ್ದಾನೆ ?

14. ಎಂಥವನು ಯೋಗಿಯಾಗಬೇಕೆಂದು ಪುಲಿಗೆರೆಯ ಸೋಮ ತಿಳಿಸಿದ್ದಾನೆ ?

15. ಧರ್ಮಪದನು ತನ್ನ ಭಾವನೆಗಳನ್ನು ಏಕೆ ಹತ್ತಿಕ್ಕಿಕೊಂಡನು ?

16. ಧರ್ಮಪದನು ತನ್ನ ಹೆಸರನ್ನು ವಿಶುವಿಗೆ ಏನೆಂದು ಹೇಳಿದನು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು–ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 14 × 2 = 28

17. ಪೊಲೀಸಿನವನು ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಲಾಕಪ್‌ನಲ್ಲಿ ಮಲಗಿಸಲು ಕಾರಣವೇನು ?

18. ಗೊರೂರರು ಪೊಲೀಸಿನವನ ಮೊರೆ ಹೋಗಲು ಕಾರಣವೇನು ?

19. ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?

20. ಜಿ.ಪಿ. ರಾಜರತ್ನಂ ಅವರು ಹೇಳಿರುವ ಕರ್ನಾಟಕತ್ವದ ನಾಲ್ಕು ಗುಣಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

21. ಅನಿಲ್ ಕುಂಬ್ಳೆಯವರ ಬಾಲ್ಯಜೀವನವನ್ನು ತಿಳಿಸಿ.

22. ರಾಮಸಿಂಗನಿಗೂ ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

23. ನಾ. ಕಸ್ತೂರಿಯವರ ಪಾಠ ಟಿಪ್ಪಣಿ ಕಳೆದುಹೋದ ಪ್ರಸಂಗವನ್ನು ತಿಳಿಸಿ.

24. ಯಾವ ಯಾವ ಧರ್ಮದುಸಿರು ಒಂದೇ ಆಗಿದೆ ಎಂದು ನಿಸಾರ್ ಅಹಮದ್‌ರು ಹೇಳಿದ್ದಾರೆ ?

25. ಹೊಸ ಮನುಷ್ಯನಾಗುವುದು ಹೇಗೆ ಎಂದು ಬಿ.ಆರ್. ಲಕ್ಷ್ಮಣ್‌ರಾವ್ ತಿಳಿಸಿದ್ದಾರೆ ?

26. ಮನಸ್ಸನ್ನು ಶುದ್ಧವಾಗಿರಿಸಲು ಅನುಸರಿಸುವ ವಿಧಾನಗಳನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ ?

27. "ಮುಕ್ತಿ ನಿನಗೆ ಕೇವಲ ಒಂದು ಗೇಣು ದೂರ" ಎಂಬುದನ್ನು ಪುರಂದರದಾಸರು ಹೇಗೆ ವಿವರಿಸಿದ್ದಾರೆ ?

28. ರೈತನು ಮಳೆರಾಯನಲ್ಲಿ ಏನೆಂದು ನಿವೇದಿಸಿಕೊಳ್ಳುತ್ತಾನೆ ?

29. ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳೇನು ?

30. ಯಲಬುರ್ಗದಿಂದ ಮುಂಡರಗಿಗೆ ಹೋಗಲು ಬಳಸು ಮಾರ್ಗ ಅನಿವಾರ್ಯವಾಗಿತ್ತು. ಏಕೆ ?

31. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 3 = 3

ಅಕ್ಷರವೆಂಬುದು ____________________

____________________

____________________

____________________ ಹೊಸ ರೂಪ.

*ಅಥವಾ*

ದೀಪ ಉಜ್ಜಿದರೆ ________________________________

________________________________

________________________________

________________________________ಸಮಸ್ತ.

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ : 4 × 3 = 12

32. "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈ ಬಿಡುವಂತಿಲ್ಲ"

33. "ಹೆಣ್ಣು ಮಗಳೇ, ಆ ಧ್ವಜವನ್ನು ಮೊದಲು ಕೆಳಗಿಡು"

34. "ಗಾನ ಕೇಳಿ ಮೌನ ತಾಳಿ ಮೂಕವಾಯ್ತು ಭಾವನಾ"

35. "ಭೂಮಿ ತಾಯ ಕುಡಿಗಳೊಂದು ಪಣವ ತೊಡಿರಿ ಇಂದೆ"

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 3 = 6

36. ಅ.ರಾ. ಮಿತ್ರ

37. ಚೆನ್ನವೀರ ಕಣವಿ

ಈ ಕೆಳಗಿನ ಪ್ರಶ್ನೆಗಳಿಗೆ ***ಎಂಟು–ಹತ್ತು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

38. ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದಕ್ಕೆ ಕಾರಣ ಹಾಗೂ ಅವರನ್ನು ಸೋಲಿಸಿದ ಪರಿಯನ್ನು ವಿವರಿಸಿ.

***ಅಥವಾ***

ಬೆಳವಡಿ ಮಲ್ಲಮ್ಮ ತನ್ನ ಪತಿ ಈಶ ಪ್ರಭುವಿಗೆ ನೀಡಿದ ಪ್ರಮಾಣವನ್ನು ಹೇಗೆ ಉಳಿಸಿಕೊಂಡಳು ?

39. ವಚನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ಮಾನವನು ಬದುಕಿನ ಚಿಂತೆಯಲ್ಲಿ ಮುಳುಗಿ ಹೋಗುವ ಪರಿಯನ್ನು ಅಂಬಿಗರ ಚೌಡಯ್ಯ ಹೇಗೆ ತಿಳಿಸಿದ್ದಾರೆ ? ವಿವರಿಸಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $12 \times 1 = 12$

40. ಆತ್ಮಾರ್ಥಕ ಸರ್ವನಾಮಕ್ಕೆ ಇದು ಉದಾಹರಣೆ

    (ಎ) ತಾವು (ಬಿ) ನಾನು

    (ಸಿ) ನೀನು (ಡಿ) ಅವನು

41. 'ಶಾಲೆಯಲ್ಲಿ' ಈ ಪದದಲ್ಲಿರುವ ವಿಭಕ್ತಿ

    (ಎ) ಪ್ರಥಮಾ (ಬಿ) ದ್ವಿತೀಯಾ

    (ಸಿ) ಸಪ್ತಮೀ (ಡಿ) ಷಷ್ಠೀ

42. 'ಸೀತೆಯ ಮುಖ ಕಮಲದಂತೆ ಅರಳಿತು' ಇಲ್ಲಿರುವ ಅಲಂಕಾರ

    (ಎ) ರೂಪಕ (ಬಿ) ದೃಷ್ಟಾಂತ

    (ಸಿ) ಉತ್ಪ್ರೇಕ್ಷೆ (ಡಿ) ಉಪಮಾ

43. 'ತಲೆಗೂದಲು' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ ?

    (ಎ) ಆದೇಶ ಸಂಧಿ (ಬಿ) ಸವರ್ಣದೀರ್ಘ ಸಂಧಿ

    (ಸಿ) ಆಗಮ ಸಂಧಿ (ಡಿ) ಲೋಪ ಸಂಧಿ

44. 'ಲಕ್ಷ್ಮೀ' ಪದದ ತದ್ಭವ ರೂಪ

(ಎ) ಲಕ್ಕಿ (ಬಿ) ಲಕುಮಿ

(ಸಿ) ಲಾಕ್ಷಣ (ಡಿ) ಲಕ್ಷ

45. 'ಆಕಾಶದಲ್ಲಿ ಹಕ್ಕಿಗಳು ಸಾಲುಸಾಲಾಗಿ ಹಾರಾಡುತ್ತಿವೆ' ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದ

(ಎ) ಹಕ್ಕಿಗಳು (ಬಿ) ಆಕಾಶದಲ್ಲಿ

(ಸಿ) ಸಾಲುಸಾಲಾಗಿ (ಡಿ) ಹಾರಾಡುತ್ತಿವೆ

46. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಅಂಶಿ (ಬಿ) ದ್ವಿಗು

(ಸಿ) ಕರ್ಮಧಾರೆಯ (ಡಿ) ದ್ವಂದ್ವ

47. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸುವಾಗ ಬಳಸುವ ಲೇಖನ ಚಿಹ್ನೆ

(ಎ) ಅರ್ಧವಿರಾಮ (ಬಿ) ಆವರಣ

(ಸಿ) ಉದ್ಧರಣ (ಡಿ) ಅಲ್ಪವಿರಾಮ

48. ಅನುಕರಣಾವ್ಯಯ ಪದಕ್ಕೆ ಉದಾಹರಣೆ

(ಎ) ಚಟಚಟ (ಬಿ) ಊರೂರು

(ಸಿ) ಕೈಕೊಡು (ಡಿ) ಹಣ್ಣು ಹಂಪಲು

49. 'ಸಮುದ್ರ' ಪದದ ಸಮಾನಾರ್ಥಕ ಪದ

(ಎ) ನದಿ (ಬಿ) ಝರಿ

(ಸಿ) ಸಾಗರ (ಡಿ) ತೊರೆ

50. 'ಕವಿ' ಪದದ ಅನ್ಯಲಿಂಗ ರೂಪ

(ಎ) ಲೇಖಕ (ಬಿ) ವಿಮರ್ಶಕ

(ಸಿ) ಸಾಧಕ (ಡಿ) ಕವಯಿತ್ರಿ

51. ಒಂದೇ ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ, ಖಚಿತ ಅರ್ಥ ಕೊಡುವ ವಾಕ್ಯವೇ

(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಮಿಶ್ರವಾಕ್ಯ (ಡಿ) ದ್ವಂದ್ವ ವಾಕ್ಯ

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನಗಳಿಗೆ ಉತ್ತರ ಬರೆಯಿರಿ : $4 \times 1 = 4$

ಕನ್ನಡ ರಂಗಭೂಮಿಗೆ ದಕ್ಷಿಣ ಕನ್ನಡ ಜಿಲ್ಲೆ ಕೊಟ್ಟಿರುವ ಕೊಡುಗೆಗಳಲ್ಲಿ ಬಿ.ವಿ. ಕಾರಂತರು ಪ್ರಮುಖರು. ಕಾರಂತರು ಬಾಲ್ಯದಲ್ಲಿಯೇ ಗುಬ್ಬಿ ಕಂಪನಿಯನ್ನು ಸೇರುವ ಬದಲು ಯಕ್ಷಗಾನ ಮೇಳವನ್ನು ಸೇರಿಬಿಟ್ಟಿದ್ದರೆ, ಯಕ್ಷಗಾನ ಸಂಪತ್ತು ಹೆಚ್ಚುತ್ತಿತ್ತೇನೊ! ಆದರೆ, ಹವ್ಯಾಸಿ ರಂಗಭೂಮಿ ಬಹಳವಾಗಿ ಕಳೆದುಕೊಳ್ಳುತ್ತಿತ್ತು. ಅವರ ತಂದೆ ನಾರಣಪ್ಪಯ್ಯ ಹಾಗೂ ತಾಯಿ ಲಕ್ಷ್ಮಮ್ಮ. 1929 ರಲ್ಲಿ ಕಾರಂತರು ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ ಜನಿಸಿದರು. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮ ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾತ್ರಿಯ ದರ್ಶನ, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಶ್ರೀಮಂತಿಕೆ.

*ಪ್ರಶ್ನೆಗಳು :*

52. ಕಾರಂತರಿಗೆ ಯಾವ ಬಡತನವಿರಲಿಲ್ಲ ?

53. ಕಾರಂತರು ಎಲ್ಲಿ ಜನಿಸಿದರು ?

54. ಕಾರಂತರು ಬಾಲ್ಯದಲ್ಲಿ ಸೇರಿದ ಕಂಪನಿ ಯಾವುದು ?

55. ಕಾರಂತರ ತಂದೆ ತಾಯಿಯರ ಹೆಸರೇನು ?

56. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : $1 \times 3 = 3$

* ದೇಶ ಸುತ್ತು; ಕೋಶ ಓದು
* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ
* ಅತಿಯಾಸೆ ಗತಿಗೇಡು

57. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ ಚಂದ್ರಶೇಖರ ಅಡಿಗ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಪ್ರವಾಸವನ್ನು ಕುರಿತು ಮೈಸೂರಿನ ಸರಸ್ವತಿಪುರಂ ಬಡವಾಣೆಯಲ್ಲಿರುವ ನಿಮ್ಮ ಗೆಳೆಯ ಮಂಜುನಾಥನಿಗೆ ಒಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಬಳ್ಳಾರಿಯ ನಿವಾಸಿ ಚಂದ್ರಲೇಖ ಎಂದು ಭಾವಿಸಿಕೊಂಡು, ಪರೀಕ್ಷಾ ಸಮಯದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸುವಂತೆ ಕೋರಿ ವಿದ್ಯುತ್ ಇಲಾಖೆಯ ಸಹಾಯಕ ಅಭಿಯಂತರರಿಗೆ ಒಂದು ಮನವಿ ಪತ್ರ ಬರೆಯಿರಿ.

58. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯದ ಬಗ್ಗೆ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : $1 \times 4 = 4$

* ರಾಷ್ಟ್ರೀಯ ಭಾವೈಕ್ಯತೆ
* ದೂರದರ್ಶನದಿಂದ ದೊರೆಯುವ ಪ್ರಯೋಜನಗಳು
* ಪರಿಸರ ಮಾಲಿನ್ಯಕ್ಕೆ ಕಾರಣಗಳು